RNU AIR DHARWAD

**DECEMBER 15,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಗದಗ ಜಿಲ್ಲೆ, ಮುಂಡರಗಿ ತಾಲೂಕು, ಕಪ್ಪತ್ತಗುಡ್ಡದಂತಹ, ಔಷಧೀಯ ಸಸ್ಯಗಳ ಹಸಿರು ವನರಾಶಿಯನ್ನು ರಕ್ಷಿಸುವುದರ ಜೊತೆಗೆ, ಈ ರಾಷ್ಟ್ರದ ಎಲ್ಲ ಅರಣ್ಯ ಪ್ರದೇಶ ಹಾಗೂ ಜೀವ ವೈವಿಧ್ಯ ಸಂರಕ್ಷಿಸಿ ಮುಂದಿನ ಜನಾಂಗಕ್ಕೆ ತಲುಪಿಸುವುದು ನಮ್ಮ ಜವಾಬ್ದಾರಿ ಎಂದು, ಕಪ್ಪತ್ತಗುಡ್ಡದ ಶ್ರೀ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ ತಿಳಿಸಿದರು. ಹುಬ್ಬಳ್ಳಿಯ ಕೆ.ಎಲ್.ಇ ಸಂಸ್ಥೆಯ ಜಿ.ಕೆ. ಕಾನೂನು ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಹವಾಮಾನ ಬದಲಾವಣೆ– ಸಮಸ್ಯೆಗಳು ಮತ್ತು ಸವಾಲುಗಳು' ಕುರಿತ, ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು. ದಿಕ್ಸೂಚಿ ಭಾಷಣ ಮಾಡಿದ ಬೆಂಗಳೂರಿನ ನ್ಯಾಶನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ ಚೇರ್ ಪ್ರೊಫೆಸರ್, ಎಂ.ಕೆ ರಮೇಶ್, "ಎಲ್ಲ ರಾಷ್ಟ್ರಗಳು ಸಂಯೋಜಿತ ಕ್ರಿಯಾ ಯೋಜನೆ ರೂಪಿಸಿ ಜಾರಿಗೊಳಿಸಿದರೆ ಜಾಗತಿಕ ತಾಪಮಾನ ಕಡಿಮೆಗೊಳಿಸಲು ಸಾಧ್ಯ ಎಂದರು.**

<><><>

**ಹುಬ್ಬಳ್ಳಿಯ ವಸುಂಧರಾ ಫೌಂಡೇಶನ್, ದಿವ್ಯಜ್ಞಾನಿ ಸಹದೇವ ಎಜುಕೇಶನಲ್ ಆಂಡ್ ಕಲ್ಚರಲ್ ಇನ್ಸ್ಟಿಟ್ಯೂಶನ್ ಸಹಯೋಗದಲ್ಲಿ, ಇಂದು ಆಯೋಜಿಸಿದ್ದ, 'ರನ್ ಫಾರ್ ನೇಚರ್' ಮ್ಯಾರಥಾನ್‌ಗೆ, ಧಾರವಾಡದ ಕರ್ನಾಟಕ ಕಾಲೇಜು ಆವರಣದಲ್ಲಿ, ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ, ಶಶಿಕುಮಾರ ಚಾಲನೆ ನೀಡಿದರು. ಮ್ಯಾರಾಥಾನ್ ನಲ್ಲಿ ಏರಡೂವರೆ ಸಾವಿರ ಜನ ಭಾಗವಹಿಸಿದ್ದರು.ವಿಶ್ವ ಮಣ್ಣು ಆರೋಗ್ಯ ದಿನಾಚರಣೆ ಹಿನ್ನೆಲೆ, ಜರುಗಿದ ಈ ಮ್ಯಾರಾಥಾನ್ ಬಗ್ಗೆ, ಧಾರವಾಡ ರೋಟರಿ ಕ್ಲಬ್ ಕೋಶಾಧಿಕಾರಿ, ಶ್ರೀಕಾಂತ ದೊಡ್ಡವಾಡ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.**

<><><>

**ಬೈಟ್: ಶ್ರೀಕಾಂತ್ ದೊಡ್ಡವಾಡ 30 ಸೆಕೆಂದು**

<><><>

**ಭಾರತೀಯ ನೌಕಾಪಡೆಯ, ಮುಂಬೈ ಪಶ್ಚಿಮ ಕಮಾಂಡ್‌ನ ವೈದ್ಯಕೀಯ ಮುಖ್ಯಸ್ಥರಾಗಿ, ಉಡುಪಿ ಮೂಲದ ಡಾಕ್ಟರ್ ಕೃಷ್ಣಮೂರ್ತಿ ಅಧಿಕಾರ ಸ್ವೀಕರಿಸಿದ್ದಾರೆ. 33 ವರ್ಷಗಳಿಂದ ನೌಕಾ ಪಡೆಯ ವಿವಿಧ ಹುದ್ದೆಗಳಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಪಡೆದು, ನಂತರ ಪುಣೆಯ ಆರ್ಮ್ಡ್ ಫೋರ್ಸ್‌ಸ್**

ಮೆಡಿಕಲ್ ಕಾಲೇಜಿನಲ್ಲಿ, ಪಿಡಿಯಾಟ್ರಿಕ್ಸ್ ಎಂ.ಡಿ. ಪೂರೈಸಿದ್ದಾರೆ. ನ್ಯೂರಾಲಜಿ ತಜ್ಞರಾಗಿರುವ ಅವರು, ವೈದ್ಯಕೀಯ ಶಿಕ್ಷಣದ ಅಂತಾರಾಷ್ಟ್ರೀಯ ಫೈಮೆರ್ ಫೆಲೋಶಿಪ್ ಗೆ ಭಾಜನರಾಗಿದ್ದಾರೆ.

<><><>

ಕೊಡಗು ಜಿಲ್ಲೆಯಾದ್ಯಂತ ಕೊಡವರ ಪ್ರಮುಖ ಕೊಯ್ಲು ಹಬ್ಬವಾದ ಹುತ್ತರಿಯನ್ನು ಸಂಭ್ರಮ ಸಡಗರದಿಂದ ಆಚರಿಸಲಾಯಿತು. ಬೆಳದಿಂಗಳ ಬೆಳಕಿನಲ್ಲಿ ಭತ್ತದ ಗದ್ದೆಗೆ ತೆರಳಿದ ಜನತೆ ಸಾಂಪ್ರದಾಯಿಕವಾಗಿ ಭತ್ತದ ತೆನೆಗೆ ಪೂಜೆಯನ್ನು ಸಲ್ಲಿಸಿ ಕದಿರನ್ನು ಕೊಯ್ದರು. ಕೊಡಗಿನ ಪ್ರಮುಖ ದೇವಾಲಯವಾದ ಶ್ರೀ ಪಾಡಿ ಇಗ್ಗುತಪ್ಪ ಸನ್ನಿಧಿ ಹಾಗೂ ಮಡಿಕೇರಿಯ ಶ್ರೀ ಓಂಕಾರೇಶ್ವರ ದೇವಾಲಯ ಸೇರಿದಂತೆ ಅನೇಕ ದೇವಾಲಯಗಳಲ್ಲಿ ಹುತ್ತರಿ ಪ್ರಯುಕ್ತ ವಿಶೇ ಷ ಪೂಜೆ ಪ್ರಾರ್ಥನೆಗಳು ಜರುಗಿದವು. ಇನ್ನು ಒಂದು ವಾರ ಕೊಡಗು ಜಿಲ್ಲೆಯಾದ್ಯಂತ ಹುತ್ತರಿಯ ಅಂಗವಾಗಿ ಸಾಂಪ್ರದಾಯಿಕ ಕೋಲಾಟ ಜರುಗಲಿದೆ.

<><><>

ಧಾರಾವಾಡದ ನರೇಂದ್ರ ಕ್ರಾಸ್ ದಿಂದ ಗಬ್ಬೂರ ವರೆಗಿನ, ರಾಷ್ಟ್ರೀಯ ಹೆದ್ದಾರಿ 48ರ ಬೈಪಾಸ್ ರಸ್ತೆಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ, ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಖುದ್ದು ಪರಿಶೀಲಿಸಿದರು. ಮುಂಬರುವ ಹದಿನೈದು ದಿನಗಳಲ್ಲಿ, ಬಾಕಿ ಕಾಮಗಾರಿಯನ್ನು ಪೂರ್ಣಗೊಳಿಸಿ, ತಮಗೆ ವರದಿ ಸಲ್ಲಿಸುವಂತೆ, ಗುತ್ತಿಗೆದಾರರಿಗೆ ಹಾಗೂ ಜಿಲ್ಲಾಡಳಿತಕ್ಕೆ ಅವರು ನಿರ್ದೇಶಿಸಿದರು.

ಕೆಲಗೇರಿ ಕೆರೆ ಬಳಿಯ ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು, ಶೀಘ್ರ ಕೈಗೆತ್ತಿಕೊಳ್ಳುವಂತೆ, ಅವರು ಸೂಚಿಸಿದರು.

<><><>

ಪತ್ರಿಕಾ ವಿತರಕರು, ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಪಡೆಯಬಹುದಾದ, ವಯಸ್ಸಿನ ಮಿತಿಯನ್ನು, 70 ವರ್ಷಕ್ಕೆ ವಿಸ್ತರಿಸಿ, ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ, ಕೆ.ವಿ.ಪ್ರಭಾಕರ್ ಅವರನ್ನು, ಗೃಹ ಕಚೇರಿ ಕೃಷ್ಣಾದಲ್ಲಿ, ಈ ನಿರ್ಣಯಕ್ಕಾಗಿ ಅಭಿನಂದಿಸಿದರು. ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ್ ಅವರು, ಸಹಾನುಭೂತಿಯಿಂದ ಪರಿಶೀಲಿಸಿ, ಕ್ರಮ ಕೈಗೊಂಡಿದ್ದಾಗಿ, ಅವರು ತಿಳಿಸಿದರು.

<><><>

ಇದೇ 19 ರಿಂದ 24ರ ವರೆಗೆ, ಮಧ್ಯಪ್ರದೇಶದ ಇಂದೋರ್‌ನಲ್ಲಿ ಆಯೋಜಿತ, ಎಸ್.ಜಿ.ಎಫ್.ಐ. ರಾಷ್ಟ್ರ ಮಟ್ಟದ ಕರಾಟೆ ಪಂದ್ಯಾವಳಿಯ, 62 ಕಿಲೋ ವಿಭಾಗದಲ್ಲಿ, ಶಿವಮೊಗ್ಗ ಜಿಲ್ಲೆಯ ಕರಾಟೆಪಟು ಮೊಹಮದ್ ಬಿಲಾಲ್ ದರ್ವೇಶ ಸ್ಪರ್ಧಿಸಲಿದ್ದಾರೆ. ಶಿವಮೊಗ್ಗ ಜಿಲ್ಲೆ ಕರಾಟೆ ಸಂಘದ, ಮೊಹಮ್ಮದ್ ಗನಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಿಯೂಸಿ ಹಂತದಲ್ಲಿ, ರಾಜ್ಯವನ್ನು ಪ್ರತಿನಿಧಿಸುತ್ತಿರುವ, ಏಕೈಕ ಕರಾಟೆ ಪಟು ಎಂದು, ತಿಳಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>